"ಮೊಟ್ಟೆ ಇಡೋ ಜಾಗಾನೆ ಬಾತು ಐಬು ಮಾಡಿದೆಯಲ್ಲಾ! ಇನ್ಮುಂದೆ ಕೋಳಿ ತತ್ತಿ ಇಡುತ್ತೋ ಇಲ್ಲವೋ?" ಎಂದು ಅತ್ತೆ ಚಿಂತಾಕ್ರಾಂತರಾದರು.

ಇವುಗಳ ಬದುಕಿನ ವಿಚಿತ್ರಗಳನ್ನು ಗಮನಿಸಿದರೆ ಆಶ್ಚರ್ಯವೇ ಆಗುತ್ತೆ. ಮೂಲತಃ ಬಾತಿನ ಮೊಟ್ಟೆಗಳಿಗೆ ಕಾವುಕೊಟ್ಟು ಮರಿ ಮಾಡುವುದೇ ಈ ಕೋಳಿಗಳು. ಇಂಥ ಸಣ್ಣ ಉಪಕಾರ ಸ್ಮರಣೆಯೂ ಈ ಅವಿವೇಕಿ ಬಾತುಗಳಿಗಿಲ್ಲ. ಬಾತು ಮೊಟ್ಟೆಯಿಟ್ಟು ಎಲ್ಲಾ ಮರೆತು ಕೆಸರಲ್ಲಿ ಹುಳಹುಪ್ಪಟೆ ಹೆಕ್ಕಿಕೊಂಡು ಆರಾಮಾಗಿ ಇರುತ್ತಿತ್ತು. ಬಾತಿನ ದೊಡ್ಡಗಾತ್ರದ ತತ್ತಿಗಳಿಗೆ ಇಪ್ಪತ್ತೈದು ದಿನ ಕಾವುಕೊಟ್ಟು ಅವುಗಳ ಸಂತಾನಭಾಗ್ಯ ಬೆಳೆಸುವ ಕೂಲಿ ಕೆಲಸವನ್ನು ಹೆಂಗೋಳಿಗಳೇ ನಿರ್ವಹಿಸುತ್ತಿದ್ದವು. ಸಾಕುವ ಬಾತುಗಳಲ್ಲಿ ಇದೇ ವಿಧ ಚಾಲ್ತಿಯಲ್ಲಿರುವಂತಿದೆ. ಕಾಡಿನಲ್ಲಿ ಸಿಕ್ಕ ನವಿಲಿನ ಮೊಟ್ಟೆಗಳನ್ನೂ ಕೋಳಿಗಳು ಮರಿ ಮಾಡಿ ಸಾಕಿದ ಉದಾಹರಣೆಯನ್ನು ನಾನು ಕಂಡಿದ್ದೇನೆ.

ಆದರೆ, ಕೆರೆಕಟ್ಟೆಗಳಲ್ಲಿ ಮೊಟ್ಟೆಯಿಡುವ ನೈಸರ್ಗಿಕ ಬದುಕಿನ ಬಾತುಗಳು ಕಾವಿಗೆ ಹೇಗೆ ಕೂರುತ್ತವೆ. ಮರಿಯನ್ನು ಹೇಗೆ ಮಾಡಿಕೊಳ್ಳುತ್ತವೆ. ನೀರಿರುವ ಜಾಗದಲ್ಲಿ ತಮ್ಮ ದೇಹದ ಶಾಖವನ್ನು ಮೊಟ್ಟೆಗಳಿಗೆ ಹೇಗೆ ತಲುಪಿಸುತ್ತವೆ ಎನ್ನುವುದೆಲ್ಲಾ ಸೋಜಿಗದ ವಿಚಾರವೇ ಸರಿ. ಕಾವಿಗೆ ಕೂತ ಹೊತ್ತಿನಲ್ಲಿ ಬಡಪಾಯಿ ಕೋಳಿಗಳು ಹೆಚ್ಚು ಆಹಾರವನ್ನೂ ಸೇವಿಸುವುದಿಲ್ಲ. ಹೀಗೆ ಉಪವಾಸ ಇರುವ ಕಾರಣಕ್ಕೋ ಏನೋ ಅವುಗಳ ಮೈ ಜ್ವರ ಬಂದಂತೆ ಸುಡುತ್ತಿರುತ್ತದೆ. ಹತ್ತಿರ ಹೋದರೆ ಮೈ ಅರಳಿಸಿ ಕೊರ್ರ್... ಕೊರ್ರ್... ಎಂದು ಗುರಾಯಿಸಿ ಮೊಟ್ಟೆ ಜೋಪಾನ ಮಾಡಲು ಅವು ಹೆಣಗಾಡುತ್ತವೆ. ತಿಂಗಳಾನುಗಟ್ಟಲೆ ಉಪವಾಸ ವ್ರತ ಮಾಡಿ ಬಾತಿನ ಜೀವಗಳನ್ನು ಸ್ವಂತ ಮಕ್ಕಳಂತೆ ಸಾಕುವ ಹ್ಯಾಟೆಗಳ ತಾಯ್ತನ ಮೆಚ್ಚುವಂಥದ್ದು. ಕೋಳಿಯನ್ನೇ ತಾಯಿಯೆಂದು ಭಾವಿಸಿ ಬೆಳೆಯುವ ಬಾತುಗಳು ಕಾಲಕ್ರಮೇಣ ದೂರವಾಗಿ ತಮ್ಮ ಆಹಾರವನ್ನು ಸ್ವತಂತ್ರವಾಗಿ ಹುಡುಕುತ್ತಿದ್ದವು. ಉಸಿರು ಕೊಟ್ಟು, ಗುಕ್ಕು ಕೊಟ್ಟ ತಾಯಿಯನ್ನೂ, ಒಡಹುಟ್ಟಿದ ಅಣ್ಣತಮ್ಮಂದಿರನ್ನೂ, ಬೇಷರತ್ತಾಗಿ ಮರೆತೇ ಬಿಡುವ ಬಾತುಗಳು ಕೆಸರಲ್ಲಿರುವ ತಮ್ಮ ಬಳಗವನ್ನು ಸೇರಿಕೊಳ್ಳುತ್ತಿದ್ದವು. ಆಕಾರದಲ್ಲೂ ವಿಚಿತ್ರವಾಗಿ ಕಾಣುವ, ತನ್ನ ಮರಿಗಳಂತೆ ಚೀಂವ್... ಚೀಂವ್... ಬದಲಾಗಿ ಕ್ವಾತ್... ಕ್ವಾತ್... ಎನ್ನುವ ಬಾತುಗಳನ್ನು ಬೇರೆ ಜೀವಿಗಳೆಂದು ಭೇದಭಾವ ಎಣಿಸಿದೆ ಸಲಹುವ ಕೋಳಿಗಳ ಹೃದಯ ವೈಶಾಲ್ಯತೆ ಮೆಚ್ಚುವಂಥದ್ದು. ಆದರೆ ಅದೇ ಹೃದಯವನ್ನು ನಾವು ಫ್ರೈ ಮಾಡಿಕೊಂಡು ಚಪ್ಪರಿಸುತ್ತೇವೆ.

ನಿಯತ್ತಿನಿಂದ ಕಾವಿಗೆ ಕೂರುವ ಒಂದು ಕರಿಕೋಳಿಯನ್ನು ಅತ್ತೆ ಬಾಣಂತನಕ್ಕೆ ಕಾಯಮ್ಮಾಗಿ ಆಯ್ಕೆ ಮಾಡಿಕೊಂಡಿದ್ದರು. ವರ್ಷದಲ್ಲಿ ನಾಲ್ಕೈದು ಸಲ ತತ್ತಿಗಳ ಮೇಲೆ ಕೂರುವುದೇ ಅದರ ಕಾಯಕವಾಗಿತ್ತು. ಇನ್ನೆರಡು ಕೋಳಿಗಳಿಟ್ಟ ಮೊಟ್ಟೆಗಳನ್ನು ಕರಿಕೋಳಿಯ ಪಾಲಿಗೆ ಸೇರಿಸಿ ಕಾವಿಗೆ ಕೂರಿಸುತ್ತಿದ್ದರು. ಜೋಪಾನವಾಗಿ ತತ್ತಿಗಳಿಗೆ ಶಾಖ ಕೊಡುವ, ಯಾವ ಮೊಟ್ಟೆಯನ್ನೂ ಒಡೆದು ನಾಶ ಮಾಡದ, ಜನ್ಮಿಸಿದ ಮರಿಗಳಿಗೆ ನಿಯಮಬದ್ಧವಾಗಿ ಪಾಠ ಹೇಳಿಕೊಡುವ ಕರಿಕೋಳಿ ಕಂಡರೆ ಅತ್ತೆಗೆ ಎಲ್ಲಿಲ್ಲದ ಪ್ರೀತಿ. ಹೀಗಾಗಿ ಅದಕ್ಕೆ ರಾಣಿಯೆಂದು ಹೆಸರಿಟ್ಟಿದ್ದರು. ದೊಡ್ಡ ಗಾತ್ರದ ಅಂಡನ್ನು ಮೈಗೂಡಿಸಿಕೊಂಡಿದ್ದ ರಾಣಿ ಇಪ್ಪತ್ತೈದು ಮೊಟ್ಟೆಗಳ ಮೇಲೆ ಒಂದು ತಿಂಗಳ ತನಕ ಶ್ರದ್ಧೆಯಿಂದ ಕೂರುವ ತಾಳ್ಮೆ ಇಟ್ಟುಕೊಂಡಿದ್ದಳು. ಜಂಭದ ಹುಂಜವೂ ಕೂಡ ರಾಣಿಯ ಬಾಣಂತನ ಮುಗಿದ ಮೇಲೆ ಹೆಚ್ಚು ಹತ್ತಿರ ಇಟ್ಟುಕೊಂಡು ನುಲಿದಾಡಿಕೊಂಡು ವಕ್ತಾನ ನಡೆಸುತ್ತಿತ್ತು.

ಮೊಟ್ಟೆ ಇಟ್ಟ ಕೋಳಿಗಳನ್ನು ಮತ್ತೆ ಬೆದೆಗೆ ತರಿಸುವುದು ಬಲು ತ್ರಾಸಿನ ಕೆಲಸ. ಅವುಗಳ